**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 197 ಡಿಟಿಇ 2013 (ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ,
6ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 25-05-2015.

**ಕೆಸಿಎಸ್ (ಸಿಸಿಎ) ನಿಯಮಗಳು 1957ರ ನಿಯಮ 11 ರ ಪ್ರಕಾರ ನೋಟಿಸ್**

ಶ್ರೀ ಗೋವಿಂದರಾಜು ಆದ ನೀವು ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ನಡೆಸಿರುವ ಅವ್ಯವಹಾರ, ದುರಾಚಾರ, ದುರ್ನಡತೆಯಿಂದ ಅಧಿಕಾರ ವ್ಯಾಪ್ತಿ ಮೀರಿ ನಡೆದುಕೊಂಡಿರುವ ಬಗ್ಗೆ ನಿಮ್ಮ ವಿರುದ್ಧ 1957ರ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, ನಿಯಮ 11ರ ನಿಯಮಗಳ ಉಪಬಂಧಗಳಗನುಸಾರವಾಗಿ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ದುರ್ನಡತೆಯ ದೋಷಾರೋಪಣೆ, ದೋಷಾರೋಪಣೆಯ ವಿವರಣೆ, ದೋಷಾರೋಪಣೆಗಳನ್ನು ಸಮರ್ಥಿಸುವ ದಸ್ತಾವೇಜುಗಳ ಮತ್ತು ಸಾಕ್ಷಿಗಳ ಪಟ್ಟಿಯನ್ನು ಅನುಕ್ರಮವಾಗಿ ಅನುಬಂಧ 1 ರಿಂದ 4 ರವರೆಗೆ ತಯಾರಿಸಿ ಇದರೊಂದಿಗೆ ಲಗತ್ತಿಸಲಾಗಿದೆ.

ಆದುದರಿಂದ ಈ ತಿಳುವಳಿಕೆ ಪತ್ರ ತಲುಪಿದ 15 ದಿನಗಳೊಳಗಾಗಿ ನಿಮ್ಮ ಪ್ರತಿವಾದದ ಲಿಖಿತ ಹೇಳಿಕೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು. ಇವರಿಗೆ ಸಲ್ಲಿಸಬೇಕೆಂದು ಮತ್ತು ನೀವು ಸ್ವತ: ಅಹವಾಲನ್ನು ಹೇಳಿಕೊಳ್ಳುವುದಿದ್ದಲ್ಲಿ ನಿಮಗೆ ಅಪೇಕ್ಷೆ ಇದ್ದರೆ ಹೇಳಲು ನಿಮಗೆ ಈ ಮೂಲಕ ಅವಕಾಶ ನೀಡಲಾಗಿದೆ ಹಾಗೂ ನೀವು ಯಾವ ಆರೋಪ ವಿಷಯವನ್ನು ಒಪ್ಪಿಕೊಳ್ಳುವುದಿಲ್ಲವೋ ಅಂತಹವುಗಳ ಬಗ್ಗೆ ಮಾತ್ರ ವಿಚಾರಣೆಯನ್ನು ನಡೆಸಲಾಗುವುದೆಂದು ಹಾಗೂ ಪ್ರತಿ ವಾದವನ್ನು ಹೇಳಿಕೆ ಮೂಲಕ ಸಲ್ಲಿಸದಿದ್ದಲ್ಲಿ ನೀವು ಹೇಳುವುದು ಏನೂ ಇಲ್ಲವೆಂದು ಭಾವಿಸಿ ಮೇಲ್ಕಂಡ ನಿಯಮಾವಳಿಯ ಪ್ರಕಾರ ಕ್ರಮಕ್ಕೆಗೊಳ್ಳಲಾಗುವುದೆಂದು ಈ ಮೂಲಕ ನಿಮಗೆ ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

25/5/15
(ಬಿ.ನಾಗಭೂಷಣ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಇವರಿಗೆ.

1. ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಪ್ರಸ್ತುತ ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ ( ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)

ಪ್ರತಿ

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.